**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 963/2019

ಪಿಡಬ್ಲು :14 ಸಿಡಬ್ಲು :26

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ಮೃತ್ಯುಂಜಯ ನಾರಗೊಂಡ |
| ತಂದೆಯ ಹೆಸರು | : | ಶ್ರೀ.ಚಿದಾನಂದ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ವೈದ್ಯರು, ಶ್ರೀ.ಮಲ್ಲಿಕಾರ್ಜುನ ಮಲ್ಟಿಸ್ಪೆಶಾಲಿಟಿ ಆಸ್ಪತ್ರೆ, ಹಾರೂಗೇರಿ |
| ವಾಸ್ತವ್ಯ | : | ಹಾರೂಗೇರಿ |
| ದಿನಾಂಕ | : | 03-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಕಳೆದ 11 ವರ್ಷಗಳಿಂದ ನಾನು ಹಾರೂಗೇರಿಯಲ್ಲಿ ಶ್ರೀ.ಮಲ್ಲಿಕಾರ್ಜುನ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಯನ್ನು ನಡೆಸುತ್ತಿದ್ದೇನೆ. ನಾನು ಎಲುಬು ಮತ್ತು ಕೀಲು ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 26-08-2017 ರಂದು ಮಧ್ಯಾಹ್ನ 12:10 ಗಂಟೆಗೆ ಮುಗಳಖೋಡ ಗ್ರಾಮದ 45 ವರ್ಷ ವಯಸ್ಸಿನ ನೇಮಿನಾಥ ಲಕ್ಷ್ಮಣ ಬಾಬನ್ನವರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಅವರನ್ನು ವಿಚಾರಿಸಲಾಗಿ ದಿನಾಂಕಃ 26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಅವರನ್ನು ಪರೀಕ್ಷಿಸಿದಾಗಃ-

1. ಹಣೆಯ ಮುಂಭಾಗದಲ್ಲಿ ಆಳವಾದ ಮತ್ತು ಹರಿತವಾದ ಗಾಯ ಆಗಿದ್ದು ನೋವು ಇತ್ತು.

2. ಬಲ ಮೊಣಕಾಲಿನಲ್ಲಿ ನೋವು ಇತ್ತು.

ನಾನು ಗಾಯಾಳುವಿನ ತಲೆ ಮತ್ತು ಮೊಣಕಾಲಿನ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ಎರಡು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 03-10-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-8 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-8 [ಎ] ಎಂದು ಗುರುತಿಸಲಾಯಿತು.

3. ದಿನಾಂಕಃ 26-08-2017 ರಂದು ಮಧ್ಯಾಹ್ನ 12:10 ಗಂಟೆಗೆ ಮುಗಳಖೋಡ ಗ್ರಾಮದ 48 ವರ್ಷ ವಯಸ್ಸಿನ ಚಾಸಾಃ 6 ಫ್ರಾಸಾಃ 2 ಶ್ರೀಕಾಂತ ಮಾರ್ತಾಂಡ ಬಾಬನ್ನವರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಅವರನ್ನು ವಿಚಾರಿಸಲಾಗಿ ದಿನಾಂಕಃ 26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಅವರನ್ನು ಪರೀಕ್ಷಿಸಿದಾಗಃ-

1. ತಲೆಯಲ್ಲಿ 4x2cm ಅಳತೆಯ ಹರಿತವಾದ ಮತ್ತು ಆಳವಾದ ಗಾಯ ಆಗಿತ್ತು. [ಯಾವ ಭಾಗ ಎಂದು ನಿಖರವಾಗಿ ನಮೂದು ಮಾಡಿರುವುದಿಲ್ಲ.]

2. ತಲೆಯಲ್ಲಿ ಊತ ಇತ್ತು.

ನಾನು ಗಾಯಾಳುವಿನ ತಲೆಯ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರಲಿಲ್ಲ. ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ಎರಡು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 03-10-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-9 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-9 [ಎ] ಎಂದು ಗುರುತಿಸಲಾಯಿತು. ಗಾಯಾಳು ದಿನಾಂಕಃ 26-08-2017 ರಿಂದ ದಿನಾಂಕಃ 09-09-2017 ರವರೆಗೆ ಒಳರೋಗಿಯಾಗಿ ದಾಖಲಾಗಿದ್ದರು.

4. ದಿನಾಂಕಃ 26-08-2017 ರಂದು ಮಧ್ಯಾಹ್ನ 12:10 ಗಂಟೆಗೆ ಮುಗಳಖೋಡ ಗ್ರಾಮದ 30 ವರ್ಷ ವಯಸ್ಸಿನ ಚಾಸಾಃ 7 ಪ್ರಾಸಾಃ 3 ಅರಿಹಂತ ಮಹಾವೀರ ಬಾಬನ್ನವರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಅವರನ್ನು ವಿಚಾರಿಸಲಾಗಿ ದಿನಾಂಕಃ 26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಅವರನ್ನು ಪರೀಕ್ಷಿಸಿದಾಗಃ-

1. ಎಡಗೈನ ಉಂಗುರ ಬೆರಳಿನಲ್ಲಿ ನೋವು ಮತ್ತು ಊತ ಇತ್ತು.

2. ಹಣೆಯ ಮೇಲೆ 4 x 2 cm ಅಳತೆಯ ಹರಿದ ಗಾಯ ಆಗಿತ್ತು.

ನಾನು ಗಾಯಾಳುವಿನ ತಲೆ ಮತ್ತು ಎಡಗೈನ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಎಡಗೈನ ಉಂಗುರ ಬೆರಳಿನ ಮೂಳೆ ಮುರಿದಿರುವುದು ಕಂಡುಬಂದಿರುತ್ತದೆ. ಮತ್ತು ಅದು ತೀವ್ರ ಸ್ವರೂಪದ ಗಾಯ ಆಗಿತ್ತು. ಗಾಯವು ಎರಡು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 03-10-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ.

ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ–10 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–10 [ಎ] ಎಂದು ಗುರುತಿಸಲಾಯಿತು. ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು ಆದರೆ ಯಾವ ದಿನಾಂಕದಂದು ಬಿಡುಗಡೆಯಾಗಿದ್ದಾರೆ ಎನ್ನುವ ಬಗ್ಗೆ ದಾಖಲೆಯಲ್ಲಿ ನಮೂದು ಇರುವುದಿಲ್ಲ.

5. ದಿನಾಂಕಃ 26–08–2017 ರಂದು ಮಧ್ಯಾಹ್ನ 12:10 ಗಂಟೆಗೆ ಮುಗಳಖೋಡ ಗ್ರಾಮದ 38 ವರ್ಷ ವಯಸ್ಸಿನ ಚಾಸಾಃ 8 ಪೊನ್ನಂಜಿ ಗಿರೆಪ್ಪ ಬಾಬನ್ನವರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಅವರನ್ನು ವಿಚಾರಿಸಲಾಗಿ ದಿನಾಂಕಃ 26–08–2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಅವರನ್ನು ಪರೀಕ್ಷಿಸಿದಾಗಃ–

1. ಹಣೆಯ ಮೇಲೆ 3 x 2 cm ಅಳತೆಯ ಹರಿದ ಗಾಯ ಆಗಿತ್ತು.

2. ಹಣೆಯ ಮೇಲೆ ಊತ ಇತ್ತು.

ನಾನು ಗಾಯಾಳುವಿನ ತಲೆಯ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರುವುದಿಲ್ಲ. ಮತ್ತು ಅದು ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ಎರಡು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 03–10–2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ–11 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–11 [ಎ] ಎಂದು ಗುರುತಿಸಲಾಯಿತು.

6. ದಿನಾಂಕಃ 26-08-2017 ರಂದು ಮಧ್ಯಾಹ್ನ 01:15 ಗಂಟೆಗೆ ಮುಗಳಖೋಡ ಗ್ರಾಮದ 26 ವರ್ಷ ವಯಸ್ಸಿನ ಚಾಸಾಃ 9 ಫ್ರಾಸಾಃ 4 ಪ್ರವೀಣ ಲಕ್ಷ್ಮಣ ಆದಪ್ಪಗೋಳ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಅವರನ್ನು ವಿಚಾರಿಸಲಾಗಿ ದಿನಾಂಕಃ 26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಅವರನ್ನು ಪರೀಕ್ಷಿಸಿದಾಗಃ-

1. ಬಲಕಾಲು ಮತ್ತು ಪಾದದಲ್ಲಿ ನೋವು ಇತ್ತು.

ನಾನು ಗಾಯಾಳುವಿನ ಬಲಕಾಲಿನ ಮತ್ತು ಬಲಪಾದದ ಎಕ್ಸರೇ ತೆಗೆಸಿದ್ದೇನೆ. ಎಕ್ಸರೇ ವರದಿ ಪ್ರಕಾರ ಮೂಳೆ ಮುರಿತ ಆಗಿರುವುದಿಲ್ಲ. ಮತ್ತು ಅದು ಸಾಧಾರಣ ಸ್ವರೂಪದ ಗಾಯ ಆಗಿತ್ತು. ಗಾಯವು ಮೂರು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 03-10-2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ-12 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-12 [ಎ] ಎಂದು ಗುರುತಿಸಲಾಯಿತು.

7. ದಿನಾಂಕಃ 26-08-2017 ರಂದು ಮಧ್ಯಾಹ್ನ 02:32 ಗಂಟೆಗೆ ಮುಗಳಖೋಡ ಗ್ರಾಮದ 40 ವರ್ಷ ವಯಸ್ಸಿನ ಚಾಸಾಃ 14 ಫ್ರಾಸಾಃ 7 ಮಿಲನ ಬಾಬು ದೇವನ್ನವರ ಎನ್ನುವವರು ತಮ್ಮ ಮೇಲೆ ಗಲಾಟೆಯಲ್ಲಿ ಗಾಯ ಆಗಿದೆ ಎಂದು ಹೇಳಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ನಾನು ಅವರನ್ನು ವಿಚಾರಿಸಲಾಗಿ ದಿನಾಂಕಃ 26-08-2017 ರಂದು ಬೆಳಗ್ಗೆ 11:00ಗಂಟೆಗೆ ಮುಗಳಖೋಡದ ದುರ್ಗಾದೇವಿ ದೇವಸ್ಥಾನದ ಬಳಿ ಗಲಾಟೆ ಆಗಿತ್ತು ಎಂದು ಹೇಳಿದ್ದರು.

ನಾನು ಗಾಯಾಳು ಅವರನ್ನು ಪರೀಕ್ಷಿಸಿದಾಗಃ–

1. ತಲೆಯ ಬಲಭಾಗದಲ್ಲಿ ಲಿ 3 x 2 cm ಅಳತೆಯ ಹರಿದ ಗಾಯ ಇತ್ತು.

ನಾನು ಗಾಯಾಳುವಿನ ತಲೆಯ ಸಿಟಿ ಸ್ಕ್ಯಾನ ಮಾಡಿಸಿದ್ದೇನೆ. ವರದಿ ಪ್ರಕಾರ ಮೂಳೆ ಮುರಿದಿರುವುದು ಕಂಡುಬರುತ್ತದೆ. ಮತ್ತು ಅದು ತೀವ್ರ ಸ್ವರೂಪದ ಗಾಯ ಆಗಿತ್ತು. ಗಾಯವು ನಾಲ್ಕು ಗಂಟೆಗಳ ಒಳಗೆ ಆಗಿತ್ತು. ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ಆಯುಧದಿಂದ ಆಗಿರುವ ಸಾಧ್ಯತೆ ಇದೆ. ಆ ಬಗ್ಗೆ ನಾನು ದಿನಾಂಕಃ 03–10–2017 ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ಗುರುತಿಸಿದ್ದಾರೆ ಅದನ್ನು ನಿಪಿ–13 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–13 [ಎ] ಎಂದು ಗುರುತಿಸಲಾಯಿತು. ಗಾಯಾಳು ದಿನಾಂಕಃ 26–08–2017 ರಿಂದ ದಿನಾಂಕಃ 01–09–2017 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ.

**ಪಾಟೀ ಸವಾಲು: 1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ**
**ಶ್ರೀ.ಹೆಚ್.ಸಿ.ಎಸ್ ವಕೀಲರಿಂದ**

ಗಾಯದ ಆಕಾರ, ಅದರ ಬಣ್ಣವನ್ನು ನೋಡಿದಾಗ ಅದು ಯಾವ ಸಮಯದಲ್ಲಿ ಆಗಿರಬಹುದು ಮತ್ತು ಯಾವ ಆಯುಧದಿಂದ ಆಗಿರಬಹುದು ಎಂದು ಹೇಳುವ ಸಾಧ್ಯತೆ ಇದೆ ಎನ್ನುವುದಕ್ಕೆ ಸಾಕ್ಷಿಯು ಆ ರೀತಿ ಅಂದಾಜು ಮಾಡಬಹುದು ಎಂದು ಹೇಳಿದ್ದಾರೆ. ಗಟ್ಟಿಯಾದ ಮತ್ತು ಮೊಂಡಾದ ಆಯುಧಗಳಿಂದ ಹರಿತವಾದ ಗಾಯಗಳು ಸಾಧ್ಯತೆ ಇಲ್ಲ ಎನ್ನುವುದು ಸರಿ.

2. ನೋವು ಇರುವ ಸ್ಥಳಗಳಲ್ಲಿ ಯಾವುದೇ ರೀತಿಯ ಗಾಯ, ಚರ್ಮದಲ್ಲಿ ವ್ಯತ್ಯಾಸ ಇಲ್ಲದೇ ಇರುವ ಸಮಯದಲ್ಲಿ ವೈಯಕ್ತಿಕ ಕಾರಣಗಳಿಂದಲೂ ಸಹ ನೋವು ಇರಬಹುದು ಎನ್ನುವುದು ಸರಿ. ನಾನು ಚಿಕಿತ್ಸೆ ನೀಡಿದ 6 ಜನ ಗಾಯಾಳುಗಳ ಕೇಸ ಶೀಟ್‌ನಲ್ಲಿ ಪ್ರತಿ ದಿನ ಅವರಿಗೆ ನೀಡಿದ ಚಿಕಿತ್ಸೆಯ ಬಗ್ಗೆ ನಮೂದು ಮಾಡಿದ್ದೇವೆ. ಸಾಮಾನ್ಯವಾಗಿ ಗುಂಪಿನಲ್ಲಿ

ಚದುರಿಸಿಕೊಂಡು ಓಡುವಾಗ, ಕೆಳಗೆ ಬಿದ್ದಾಗ ಅಥವಾ ವಾಹನದಿಂದ ಕೆಳಗೆ ಬಿದ್ದಾಗ ನಾನು ನಿಪಿ–8 ರಿಂದ ನಿಪಿ–13 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎನ್ನುವುದು ಸರಿ.

3. ನಾನು ಚಿಕಿತ್ಸೆ ನೀಡಿದ ಗಾಯಾಳುಗಳ ಬಗ್ಗೆ ಪೋಲಿಸರಿಗೆ ಮಾಹಿತಿ ನೀಡಿದ್ದೇನೆ. ನಿಪಿ–8 ರಿಂದ ನಿಪಿ–13 ರ ಗಾಯದ ಪ್ರಮಾಣ ಪತ್ರದಲ್ಲಿ ರಕ್ತ ಗಾಯ ಆಗಿತ್ತು ಎಂದು ಬರೆದಿಲ್ಲ ಎನ್ನುವುದು ಸರಿ. ಬಾಬನ್ನವರ ಕುಟುಂಬದವರ ಕೋರಿಕೆಯ ಮೇರೆಗೆ ಹಾಗೂ ಪೋಲಿಸರ ಹೇಳಿಕೆಯ ಮೇರೆಗೆ ನಿಪಿ–8 ರಿಂದ ನಿಪಿ–13 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ಶ್ರೀ.ಆರ್.ಕೆ.ಬಿ ವಕೀಲರಿಂದ**

1 ರಿಂದ 4, 8, 9, 13 ಮತ್ತು 17 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 5 ರಿಂದ 7, 10 ರಿಂದ 12, 14 ರಿಂದ 16 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.